**ಕೆಂ**ಪರಾಜು ಕೆಂಪು ಬಸ್ ಹತ್ತಿ ಕಿಟಕಿ ಪಕ್ಕದಲ್ಲಿ ಕೂತಿದ್ದ. ಅವನು ಕೂತಿದ್ದುದು ಡಬಲ್ ಸೀಟ್ ಕಡೆಯಲ್ಲಾದ್ದರಿಂದ ತನ್ನ ಪಕ್ಕದ ಇನ್ನೊಂದು ಸೀಟಿಗೆ ಸಣಕಲು ದೇಹದ ಯಾರಾದರೂ ಬರಲಿ ಎಂದು ಬಯಸಿದ್ದ. ಯಾಕೆಂದರೆ ಕೆಂಪಣ್ಣ ಗಾತ್ರದಲ್ಲಿ ತುಸು ದಪ್ಪಗಿದ್ದು ಮುಟ್ಟಿದವರಿಗೆ ಉಂಡುಂಡಗೆ ಸಿಗುವವನಾಗಿದ್ದ. ಹಾಗಂತ ಪಕ್ಕದಲ್ಲಿ ಕೂರುವವರು ಇವನ ಮೈ ಮುಟ್ಟಿ ಪರೀಕ್ಷಿಸುತ್ತಾರಂತೇನಲ್ಲ! ದೊಪ್ಪ ಗಾತ್ರ, ಆಕಾರದವರು ಈಗಿನ ಗೌರ್ಮೆಂಟ್ ಬಸ್ಸಿನ ಸೀಟಿನಲ್ಲಿ ಕೂತರೆಂದರೆ ಇಳಿಯುವವರೆಗಿನ ವನವಾಸ ಹೇಳತೀರದು. ಒಬ್ಬರು ಮುಂದೆ ಬಗ್ಗಿ ಮುಂದಿನ ಸೀಟಿಗೆ ತಲೆ ಕೊಟ್ಟರಷ್ಟೆ ಇನ್ನೊಬ್ಬರು ತಮ್ಮ ಸೀಟಿಗೆ ಒರಗಿ ಕೂರಬಹುದು. ದಡಿ ಗಾತ್ರದ ಇಬ್ಬರೂ ಒಟ್ಟಿಗೆ ಒರಗಿ ಕೂರುತ್ತೇನೆಂದರೆ ಅದು ಜಟ್ಟಿಗಳಿಬ್ಬರ ಭುಜ ಕಾಳಗವಾಗುವುದರಲ್ಲಿ ಯಾವುದೇ ಅನುಮಾನವಿಲ್ಲ. ಇಂಥ ಸಂದಿಗ್ಧದಲ್ಲಿ ಕೆಂಪಣ್ಣನ ಪಕ್ಕದ



ಕಲೆ: ಎಸ್.ವಿ. ಹೂಗಾರ